**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಗುಬ್ಬಿ**

**ಸಿ.ಸಿ. ಸಂಖ್ಯೆ:680/2025**

ಫಿರ್ಯಾದಿ ರಾಜ್ಯದ ಪರವಾಗಿ ಸಿ.ಎಸ್.ಪುರ ಆರಕ್ಷಕ ಠಾಣೆ

**ವಿರುದ್ಧ**

ಆರೋಪಿಗಳು ಸುರೇಶ ಮತ್ತೊಬ್ಬರು

**: ದೋಷಾರೋಪಣೆ :**

ಮೇಧಾ ಪಿ.ಎಂ. ಬಿ.ಎ., ಎಲ್.ಎಲ್.ಬಿ. ಅಧಿಕ ಸಿವಿಲ್‌ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಗುಬ್ಬಿ ಆದ ನಾನು ಆರೋಪಿಯಾದ

1. ಸುರೇಶ ಬಿನ್ ಲೇಟ್ ಸಿದ್ದಲಿಂಗಯ್ಯ,
   42 ವರ್ಷ,

2. ಅನಂತಲಕ್ಷ್ಮಿ ಕೋಂ ಸುರೇಶ,
   38 ವರ್ಷ,

   ಇಬ್ಬರೂ ವಾಸ ಃ ಸಿ. ಕೊಡಿಗೇಹಳ್ಳಿ ಮಜರೆ, ವಡ್ಡರಹಟ್ಟಿ,
   ಹಾಲಿ ವಾಸ ಃ ಸಿ.ಎನ್. ಪಾಳ್ಯ ಗೇಟ್, ಸಿ.ಎಸ್.ಪುರ,
   ಗುಬ್ಬಿ ತಾಲ್ಲೂಕು.

ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ಮೊದಲನೆಯದಾಗಿ, ದಿನಾಂಕ 30-03-2025 ರಂದು ಮಧ್ಯಾಹ್ನ 01-30 ಗಂಟೆ ಸಮಯದಲ್ಲಿ ಸಿ.ಎಸ್.ಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಸಿ.ಕೊಡಗೇಹಳ್ಳಿ ಮಜರೆ ವಾಡ್ಡರಹಟ್ಟಿ ಗ್ರಾಮದ ಶನಿದೇವರ ದೇವಸ್ಥಾನದ ಮುಂಭಾಗವಿರುವ ಅತ್ತಿ ಮರದ ಬಳಿ ಸಾಕ್ಷಿ 2 ಸ್ವಾತಿ ಮತ್ತು ಸಾಕ್ಷಿ 3 ರಘು ರವರು ಮಾತನಾಡುವಾಗ ಆರೋಪಿತರಾದ ನೀವಿಬ್ಬರೂ ದೇವಸ್ಥಾನದ ಪೂಜಾರಿಕೆಯ ವಿಚಾರದಲ್ಲಿನ ದ್ವೇಷದಿಂದ ಏಕಾಏಕಿ ಸಾಕ್ಷಿ 2 ರವರಿಗೆ ದೇವಸ್ಥಾನದ ಹತ್ತಿರ ಯಾಕೆ ಬಂದೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದಿ ನೀವಿಬ್ಬರೂ ಸಮಾನ ಉದ್ದೇಶದಿಂದ ಕೈಗಳಿಂದ ಸಾಕ್ಷಿ 2 ರವರ ಎಡಗೈಯ ಹಿಂಭಾಗದಲ್ಲಿ, ಬಲಗೈ ಹಿಂಭಾಗದಲ್ಲಿ ಮತ್ತು ಬಲಗೈ ಅಂಗೈಯಲ್ಲಿ ಹಾಗೂ ಬಲಮೊಣಕಾಲಿನ ಕೆಳಗಡೆ 3 ಇಂಟು 1 ಸೆಂ.ಮೀ. ನಷ್ಟು ಉದ್ದದ ಉಜ್ಜಿರುವಂತೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ 1 ರವರಿಗೆ ಕುಡುಗೋಲಿನ ಹಿಂಭಾಗದಿಂದ ತಲೆಯ ನೆತ್ತಿಯ ಮದ್ಯಭಾಗಕ್ಕೆ ಹೊಡೆದು 6 ಸೆಂ.ಮೀ ನಷ್ಟು ಉದ್ದದ ಸಾಮಾನ್ಯ ಸ್ವರೂಪದ ಗಾಯವನ್ನು ಹಾಗೂ 2ನೇ ಆರೋಪಿಯಾದ ನೀವು ದೊಣ್ಣೆಯಿಂದ ಸಾಕ್ಷಿ 1 ರವರ ಎಡಗೈ ಮುದೋಳಿನ ಹಿಂಭಾಗಕ್ಕೆ ಹೊಡೆದು 6 ಸೆಂ.ಮೀ ನಷ್ಟು ಉದ್ದ ಕತ್ತರಿಸಿದಂತೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 118(1) ಸಹವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಮೇಲ್ಕಂಡ ಆಪಾದನೆಯು ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸಹಿ/–

ದಿನಾಂಕ ಃ **ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.**

**ಗುಬ್ಬಿ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಗುಬ್ಬಿ**

**ಸಿ.ಸಿ. ಸಂಖ್ಯೆ:680/2025**

| **ಪಿರ್ಯಾದುದಾರರು :** | **ವಿರುದ್ಧ** | **ಆಪಾದಿತರು :** |
|---|---|---|
| ಸಿ.ಎಸ್.ಪುರ ಪೋಲೀಸ್ | | ಸುರೇಶ |

**ಆರೋಪಣೆ (1ನೇ ಆರೋಪಿ)**

1. ಈ ಮೇಲೆ ಓದಿ ಹೇಳಿದ ದೋಷಾರೋಪಣೆಯು ನಿಮಗೆ ಅರ್ಥವಾಯಿತೇ?
   ಉತ್ತರಃ

2. ತಪ್ಪು ಒಪ್ಪಿಕೊಳ್ಳುವಿರೋ? ವಿಚಾರಣೆಯಾಗಬೇಕೆಂದು ಬಯಸುವಿರೋ?
   ಉತ್ತರಃ

ಸಹಿ/–

ದಿನಾಂಕ :

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.**
**ಗುಬ್ಬಿ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಗುಬ್ಬಿ**

**ಸಿ.ಸಿ. ಸಂಖ್ಯೆ:680/2025**

| **ಪಿರ್ಯಾದುದಾರರು :** | **ವಿರುದ್ಧ** | **ಆಪಾದಿತರು :** |
|---|---|---|
| ಸಿ.ಎಸ್.ಪುರ ಪೋಲೀಸ್ | | ಅನಂತಲಕ್ಷ್ಮಿ |

**ಆರೋಪಣೆ (2ನೇ ಆರೋಪಿ)**

1. ಈ ಮೇಲೆ ಓದಿ ಹೇಳಿದ ದೋಷಾರೋಪಣೆಯು ನಿಮಗೆ ಅರ್ಥವಾಯಿತೇ?
   ಉತ್ತರಃ

2. ತಪ್ಪು ಒಪ್ಪಿಕೊಳ್ಳುವಿರೋ? ವಿಚಾರಣೆಯಾಗಬೇಕೆಂದು ಬಯಸುವಿರೋ?
   ಉತ್ತರಃ

ಸಹಿ/–

ದಿನಾಂಕ :

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.**
**ಗುಬ್ಬಿ**